ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

ಸಿ.ಸಿ ನಂ. **2187/2014**

ಚಾಸಾಃ 12
ಫ್ರಾಸಾಃ 11

ದಿನಾಂಕಃ **31-08-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಶಿವಕುಮಾರ್ |
| ತಂದೆಯ/ಗಂಡನ ಹೆಸರು | ಮಲ್ಲಿಕಾರ್ಜನಯ್ಯ |
| ವಯಸ್ಸು | 46 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಲಿಂಗದಹಳ್ಳಿ ಗ್ರಾಮ |

ಮುಖ್ಯ ವಿಚಾರಣೆ ಎಪಿಪಿಯವರಿಂದಃ

**2** ಮತ್ತು **3** ನೇ ಆರೋಪಿತರು ಈ ದಿನ ಗೈರುಹಾಜರಾಗಿದ್ದು, ಆರೋಪಿತರನ್ನು ಗುರುತಿಸುವಿಕೆಗೆ ಆರೋಪಿತರ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ಹೇಳಿರುತ್ತಾರೆ .

ಆರೋಪಿತರ ಪರಿಚಯ ಇರುವುದಿಲ್ಲ . ಚಾಸಾ-**1** ಮತ್ತು **2** ರವರ ಪರಿಚಯ ಇರುವುದಿಲ್ಲ . ಚಾಸಾ-**10** ರವರ ಪರಿಚಯ ಇದೆ, ಚಾಸಾ-**11** ರವರ ಪರಿಚಯ ಇರುವುದಿಲ್ಲ.

ಸಾಕ್ಷಿಯು ಒಂದು ದಾಖಲೆಯ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಮಹಜರ್ ಆಗಿದ್ದು ಅದನ್ನು ನಿಪಿ-**2** ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ-**2(ಬಿ)** ಎಂದು ಗುರುತಿಸಲಾಯಿತು. ದಿನಾಂಕ **16-08-2014** ರಂದು ನೊಣವಿನಕೆರೆಯ ಮಠದ ಪಾಳ್ಯ ಗ್ರಾಮದ ಆರೋಪಿತರ ಮನೆಯ ಮುಂದೆ ನಿಪಿ.**2** ಕ್ಕೆ ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆ ಸಮಯದಲ್ಲಿ ಚಾಸಾ-**1** , **10** ಹಾಗೂ ನಾನು

ನಿಪಿ.**2** ಕ್ಕೆ ಸಹಿ ಮಾಡಿರುತ್ತೇವೆ. ನೊಣವಿನಕೆರೆ ಪೊಪಲೀಸರು ನಮ್ಮದ್ದ ಸಮಕ್ಷಮದಲ್ಲಿ ನಿಪಿ.**2** ರಂತೆ ಪಂಚನಾಮೆಯನ್ನು ಸಂಜೆ **5.00** ರಿಂದ **5.30** ರ ವರೆಗೆ ಜರುಗಿಸಿದರು. ಸದರಿ ಪಂಚನಾಮೆಯ ಚಕ್ಕುಬಂಧಿ ಉತ್ತರಕ್ಕೆ- ಗುರುವಣ್ಣ ರವರ ಮನೆ, ದಕ್ಷಿಣಕ್ಕೆ, ಪೂರ್ವಕ್ಕೆ ಹಾಗೂ ಪಶ್ಚಿಮಕ್ಕೆ ಆರೋಪಿತರ ತೋಟ ಇರುತ್ತದೆ.

ಪಾಟೀ ಸವಾಲು ಶ್ರೀ ಸಿ.ವಿ. ವಕೀಲರಿಂದಃ

ಚಾಸಾ-1 ಮತ್ತು 2 ರವರನ್ನು ನಾನು ನೋಡಿರುವುದಿಲ್ಲ ಮತ್ತು ಅವರ ಪರಿಚಯ ಇರುವುದಿಲ್ಲ ಚಾಸಾ-10 ರವರ ಪರಿಚಯ ಇದೆ ಅವರು ನನ್ನ ಸ್ನೇಹಿತರಾಗಬೇಕು. ಚಾಸಾ-11 ರವರ ಪರಿಚಯ ನನಗೆ ಇರುವುದಿಲ್ಲ. ನಮ್ಮದು ಕಸಬಾ ಹೋಬಳಿಗೆ ಸೇರುತ್ತದೆ. ನೊಣವಿನಕೆರೆಯ ಗ್ರಾಮವು ನೋಣವಿನಕೆರೆ ಹೋಬಳಿಗೆ ಸೇರುತ್ತದೆ. ನೊಣವಿನಕೆರೆ ಗೂ ಹಾಗೂ ಲಿಂಗದಹಳ್ಳಿಗೂ ಸುಮಾರು 17 ಕಿ. ಮೀ. ಅಂತರವಿರುತ್ತದೆ. ನಾನು ಅ ದಿನದಂದು ಕೇವಲ ಒಂದು ಸಹಿಯನ್ನು ಮಾಡಿರುತ್ತೇನೆ. ಸದರಿ ಸಹಿಯನ್ನು ನಾನು ಘಟನಾ ಸ್ಥಳದಲ್ಲಿ ಮಾಡಿರುತ್ತೇನೆ. ನಾನು ನಿಪಿ.2 ಕ್ಕೆ ಪೋಲೀಸರು ಗುರುತಿನ ರೀತಿ X ಎಂದು ಗುರುತು ಹಾಕಿದ ಜಾಗದಲ್ಲಿ ಸಹಿ ಮಾಡಿರುತ್ತೇನೆ . ನಾವು ಘಟನಾ ಸ್ಥಳಕ್ಕೆ ಹೋದ ನಂತರ ನಿಪಿ.2 ರಂತೆ ಸ್ಥಳ ಪಂಚನಾಮೆಯನ್ನು ಬರೆದಿರುತ್ತಾರೆ. ಸದರಿ ನಿಪಿ.2 ನ್ನು ಸಂಜೆ 5.00 ರಿಂದ 5.30 ತನಕ ಬರೆದಿರುತ್ತಾರೆ . ಘಟನಾ ಸ್ಥಳ ಅಕ್ಕ-ಪಕ್ಕ ಯಾವುದೇ ಮನೆ ಇರಲಿಲ್ಲ. ನನ್ನನ್ನು ಚಾಸಾ-10 ರವರು ಘಟಾ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ. ನಾನು ಮತ್ತು ಚಾಸಾ-10 ರವರು ತುರುವೇಕೆರೆ ಕಡೆಯಿಂದ ಬರುತ್ತಿದ್ದಾಗ ಚಾಸ—10 ನನ್ನನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಬಂದಿರುತ್ತಾರೆ. ಪೋಲಿಸರು ಸದರಿ ಪಂಚನಾಮೆಗೆ ಬರುವಂತೆ ಮುಂಚಿತವಾಗಿ ಯಾವುದೇ ನೋಟೀಸನ್ನು ನೀಡಿರಲಿಲ್ಲ. ನಿಪಿ.2 ರಲ್ಲಿರುವ ಅಂಶಗಳನ್ನು ಪೋಲಿಸರು ನನಗೆ ಓದಿ ಹೇಳಿರುವುದಿಲ್ಲ. ಸದರಿ ನಿಪಿ.2 ಕ್ಕೆ ಚಾಸ-1 , 10 ಹಾಗೂ ನಾನು ಸಹಿಯನ್ನು ಮಾಡಿರುತ್ತೇವೆ.

ನಾನು ಘಟನಾ ಸ್ಥಳಕ್ಕೆ ಹೋಗುವ ಮುಂಚಿತವಾಗಿ ಪೋಲಿಸರು ಅಲ್ಲಿಗೆ ಬಂದಿದ್ದರು. ಪೋಲಿಸರು ಅಲ್ಲಿ ಹಾಜರಿದ್ದಂತ ಜನಗಳನ್ನು ಮಾತನಾಡಿಸಿದರು.

ಸದರಿ ದಿನ ಘಟನಾ ಸ್ಥಳಕ್ಕೆ ಹೋಗಿರಲಿಲ್ಲ, ಯಾವುದೇ ಸ್ಥಳ ಪಂಚನಾಮೆ ಮಾಡಿರುವುದಿಲ್ಲ ಚಾಸ-- 10 ರವರ ವಿಶ್ವಾಸಕ್ಕೋಸ್ಕರ ಚಾಸಾ-1 ರವರಿಗೇ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.

ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

ಸಿ.ಸಿ ನಂ. **1437/2021**

ಚಾಸಾಃ  2
ಫ್ರಾಸಾಃ  2

ದಿನಾಂಕಃ **05-06-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | |
| ತಂದೆಯ/ಗಂಡನ ಹೆಸರು | |
| ವಯಸ್ಸು | 39 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | |

ಮುಖ್ಯ ವಿಚಾರಣೆ ಎಪಿಪಿಯವರಿಂದಃ

ಆರೋಪಿ ನನಗೆ ಗೊತ್ತು ಅವರು ನಮ್ಮ  ಊರಿನವರು. ಈ ಕೇಸಿನ ಬಗ್ಗೆ ನನಗೆ ಏನೂ ಗೊತ್ತಿಲ್ಲ ಠಾಣೆಯಲ್ಲಿ ಒಂದು ದಾಖಲಾತಿಗೆ ಸಹಿ ಮಾಡಿ ಎಂದು ಪೊಲೀಸರು ಕೋರಿರುವ ಮೇರೆಗೆ ನಾನು ಸಹಿಯನ್ನು ಮಾಡಿರುತ್ತೇನೆ ಅದನ್ನು ಬಿಟ್ಟು ಬೇರೆ ಯಾವುದೇ ವಿಷಯ ಈ ಕೇಸಿನಲ್ಲಿ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ನೋಡಿ ಸಾಕ್ಷಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯನುಡಿದಿರುವ ಕಾರಣ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದಃ

ದಿಃ

ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ಎಲ್ಲಾ ವಿಷಯ ತಿಳಿದು ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಇರುವುದಿಲ್ಲ

ಸಾಕ್ಷಿಯ ನಿರಾಕರಿಸಿದ ಹೇಳಿಕೆಯನ್ನು ನಿಡಿ -2 ಎಂದು ಗುರುತಿಸಲಾಯಿತು. ನಾನು ಆರೋಪಿತರೊಂದಿಗೆ ಸೇರಿಕೊಂಡು ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನ್ಯಾಯಾಲಯಕ್ಕೆ ಹೇಳಿರುತ್ತಾರೆ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.